RNU AIR DHARWAD

OCTOBER 24, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- **ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ;** ರಾಜ್ಯ ಸರ್ಕಾರದ ಪಾಲಿನ, ಪ್ರೀಮಿಯಂ ಮೊತ್ತ ಪಾವತಿಸಲು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಒತ್ತಾಯ.
- **'ರಾಷ್ಟ್ರೀಯ ಶಿಕ್ಷಣ ನೀತಿ' ಮೂಲಕ,** 'ನವ ಭಾರತ'ದ ನಿರ್ಮಾಣ – ಪ್ರಧಾನಮಂತ್ರಿ ನರೇಂದ್ರ ಮೋದಿ.
- **ವಿಶ್ವ ಶಾಂತಿಗಾಗಿ ಸ್ಥಾಪನೆಗೊಂಡ,** ವಿಶ್ವಸಂಸ್ಥೆಯ, ಸಂಸ್ಥಾಪನಾ ದಿನವಿಂದು.
- **ಇಂದು, ವಿಶ್ವ ಪೊಲಿಯೊ** ಜನ ಜಾಗೃತಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಅಡಿ, ರಾಜ್ಯದ ರೈತರ, ತನ್ನ ಪಾಲಿನ ಪ್ರೀಮಿಯಂ ಸಹಾಯಧನ, ಸಾವಿರದ 3 ನೂರಾ 42 ಕೋಟಿ ರೂಪಾಯಿ, ಕೇಂದ್ರ ನೀಡಿದೆ; ಆದರೆ, ರಾಜ್ಯ ಸರ್ಕಾರ, ತನ್ನ ಪಾಲಿನ, ಸಾವಿರದ 6 ನೂರಾ 80 ಕೋಟಿ ರೂಪಾಯಿ ಪ್ರೀಮಿಯಂ ಮೊತ್ತವನ್ನು, ಕಳೆದ ಒಂದೂವರೆ ತಿಂಗಳಿಂದ ಬಾಕಿ ಉಳಿಸಿಕೊಂಡಿದ್ದು, ಬರದಿಂದ ಸಂಕಷ್ಟದಲ್ಲಿರುವ ರೈತರಿಗೆ, ಸಕಾಲದಲ್ಲಿ ಪರಿಹಾರ ತಲುಪಲು ಅಡಚಣೆಯಾಗಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕಳವಳ ವ್ಯಕ್ತ ಪಡಿಸಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ, ಪತ್ರದ ಮೂಲಕ, ತಾವು ಮನವಿ ಮಾಡಿದ್ದು, ರಾಜ್ಯ ಸರ್ಕಾರದ ಪಾಲಿನ ಪ್ರೀಮಿಯಂ ಮೊತ್ತವನ್ನು, ತಕ್ಷಣ ಬಿಡುಗಡೆ ಮಾಡುವಂತೆ, ನಿರ್ದೇಶಿಸಲು ಕೋರಿದ್ದಾಗಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು, 26ನೇ ತಾರೀಖು ಸೋಮವಾರ, ಬೆಳಗಾವಿಯಲ್ಲಿ, ಕಬ್ಬು ಬೆಳೆಗಾರರೊಂದಿಗೆ ಸಭೆ ಆಯೋಜಿಸಿದ್ದು, ತಾವು ಪೂರ್ವನಿಗದಿತ 'ಬ್ರಿಕ್ಸ್' ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದು, ರೈತರ ಸಮಸ್ಯೆ ಪರಿಹರಿಸಲು, ಜಂಟಿ ಪ್ರಯತ್ನ ಕೈಗೊಳ್ಳುವುದಾಗಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರ, ಕಬ್ಬು ಬೆಳೆಗಾರರಿಗೆ ಪರಿಹಾರ ಒದಗಿಸಲು, ಕೂಡಿ ನಿರ್ಧರಿಸಿಲಿವೆ ಎಂದು, ತಾವು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾಗಿ, ಕೇಂದ್ರ ಸಚಿವರು ಹೇಳಿದರು.

<><><>

ಹೊಸ ದಿಲ್ಲಿಯ, ಸಂಸತ್ ಭವನದ ಪ್ರೇರಣಾ ಸ್ಥಳದಲ್ಲಿ, ಕನ್ನಡನಾಡಿನ ವೀರವನಿತೆ ಕಿತ್ತೂರು ರಾಣಿ ಚನ್ನಮ್ಮನವರ ಪ್ರತಿಮೆಗೆ, ಗಣ್ಯರು ಪುಷ್ಪಾರ್ಚನೆ ಮೂಲಕ, 202ನೇ ವಿಜಯೋತ್ಸವವನ್ನು, ಸಂಭ್ರಮದಿಂದ ಆಚರಿಸಿದರು. ಲೋಕಸಭೆ ಸಭಾಪತಿ ಓಂ ಬಿರ್ಲಾ, ಕೇಂದ್ರ ಸಚಿವ ಸಿ.ಆರ್ ಪಾಟೀಲ, ಕೇಂದ್ರದ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಪಾಲ್ಗೊಂಡು, ರಾಣಿ ಚನ್ನಮ್ಮನವರ ಗುಣಗಾನ ಮಾಡಿದರು.

<><><>

ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ, ಸ್ವಾತಂತ್ರ್ಯದ ಮೊದಲ ಕಹಳೆ ಮೊಳಗಿಸಿದ ಹಾಗೂ ಯುದ್ಧ ಭೂಮಿಯಲ್ಲಿ, ಬ್ರಿಟಿಷ್ ಅಧಿಕಾರಿ, ಥ್ಯಾಕರೆಯನ್ನು ಹೊಡೆದುರಳಿಸಿ, ವಿಜಯ ಸಾಧಿಸಿದ, ಕಿತ್ತೂರಿನ ವೀರರಾಣಿ ಚನ್ನಮ್ಮಾಜಿ ಅವರ ಸ್ಮರಣಾರ್ಥ, ಬೆಳಗಾವಿ ಜಿಲ್ಲೆ, ಕಿತ್ತೂರಿನಲ್ಲಿ ಆಯೋಜಿತ, ಮೂರು ದಿನಗಳ ಕಿತ್ತೂರು ವಿಜಯೋತ್ಸವಕ್ಕೆ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ಚಾಲನೆ ನೀಡಿದರು.

<><><>

'ನವ ಭಾರತ'ದ ನಿರ್ಮಾಣಕ್ಕಾಗಿ, 'ರಾಷ್ಟ್ರೀಯ ಶಿಕ್ಷಣ ನೀತಿ'ಯನ್ನು, ಕೇಂದ್ರ ಸರ್ಕಾರ ಜಾರಿಗೊಳಿಸಿದೆ; ಭಾರತದ ಶ್ರೀಮಂತ ಸಂಸ್ಕೃತಿ ಮತ್ತು ಪಾರಂಪರಿಕೆ ಜ್ಞಾನಕ್ಕೆ ಒತ್ತು ನೀಡಿ, ಮಾತೃಭಾಷಾ ಶಿಕ್ಷಣಕ್ಕೆ ಆದ್ಯತೆ ನೀಡಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹೇಳಿದ್ದಾರೆ. ಹೊಸ ದಿಲ್ಲಿಯ, ಭಾರತ ಮಂಟಪಂದಲ್ಲಿ, 'ಚಿನ್ಮಯ ಮಿಷನ್ ಅಮೃತ ಮಹೋತ್ಸವ; ಜಾಗತಿಕ ಸಮಾವೇಶ'ವನ್ನು ಉದ್ಘಾಟಿಸಿ, ಅವರು ಮಾತನಾಡಿದರು. 1951 ರಲ್ಲಿ ಸ್ವಾಮಿ ಚಿನ್ಮಯಾನಂದರು ಸ್ಥಾಪಿಸಿದ, ಚಿನ್ಮಯ ಮಿಷನ್, 75 ವರ್ಷಗಳನ್ನು ಪೂರ್ಣಗೊಳಿಸಿದ್ದು, ವಿಶೇಷ ಎಂದರು. ಮೂರು ದಿನಗಳ ಸಮ್ಮೇಳನದಲ್ಲಿ, 75 ಹೆಚ್ಚು ಶ್ರದ್ಧಾಳುಗಳೊಂದಿಗೆ ಪಾಲ್ಗೊಂಡಿರುವ, ಚಿನ್ಮಯ ಮಿಷನ್ ಧಾರವಾಡ ಘಟಕದ ಅಧ್ಯಕ್ಷ, ಹಿರಿಯ ಲೆಕ್ಕ ಪರಿಶೋಧಕ, ಸಿ.ಎಸ್. ಕುಲಕರ್ಣಿ ಅವರು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಸಿ.ಎ. ಸಿ.ಎಸ್. ಕುಲಕರ್ಣಿ ಧ್ವನಿ 35 ಸೆಕೆಂದುಗಳು

<><><>

ರಾಜ್ಯ ವಿಧಾನ ಪರಿಷತ್ತಿನ ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಮತಕ್ಷೇತ್ರಗಳೂ ಸೇರಿ, ಒಟ್ಟು ನಾಲ್ಕು ಸ್ಥಾನಗಳಿಗೆ, ನಿನ್ನೆ ಮತದಾನ ನಡೆಯಿತು. ಮಂಗಳವಾರ 27 ನೇ ತಾರೀಖು, ಮತ ಎಣಿಕೆ ನಿಗದಿಯಾಗಿದೆ. ಆಗ್ನೇಯ ಪದವೀಧರ ಮತಕ್ಷೇತ್ರದಲ್ಲಿ, ಶೇಕಡ 73 ದಶಾಂಶ 5–8, ಪಶ್ಚಿಮ ಪದವೀಧರ ಮತಕ್ಷೇತ್ರದಲ್ಲಿ, ಶೇಕಡ 75 ದಶಾಂಶ 6–2, ಈಶಾನ್ಯ ಶಿಕ್ಷಕರ ಮತಕ್ಷೇತ್ರದಲ್ಲಿ ಶೇಕಡ 86 ದಶಾಂಶ 9–7

ಹಾಗೂ ಬೆಂಗಳೂರು ಶಿಕ್ಷಕರ ಮತಕ್ಷೇತ್ರದಲ್ಲಿ ಶೇಕಡ 81 ದಶಾಂಶ 9–8 ರಷ್ಟು ಮತದಾನ ದಾಖಲಾಗಿದೆ ಎಂದು, ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು, ವಿಶ್ವ ಪೊಲಿಯೊ ದಿನಾಚರಣೆ. 'ಒಂದು ದಿನ, ಒಂದು ಗುರಿ; ಪೊಲಿಯೊ ಶಾಶ್ವತವಾಗಿ, ನಿರ್ಮೂಲಿಸೋಣ' ಎಂಬ ಧ್ಯೇಯದೊಂದಿಗೆ, ಪೊಲಿಯೊ ಮೈಲಿಟಿಸ್ ರೋಗದ ಬಗ್ಗೆ, ಜನ ಜಾಗೃತಿ ಮೂಡಿಸಲಾಗುತ್ತಿದೆ. ವಿಶ್ವ ಪೊಲಿಯೊ ದಿನಾಚರಣೆ, ವಿಶ್ವಾದ್ಯಂತ ಪೊಲಿಯೊ ಕೊನೆಗೊಳಿಸುವ, ಜಾಗತಿಕ ಪ್ರಯತ್ನಗಳನ್ನು, ಎತ್ತಿ ತೋರಿಸುವ, ದಿನ. ವಿಶ್ವ ಆರೋಗ್ಯ ಸಂಸ್ಥೆ ಸಭೆ, 1988ರಲ್ಲಿ ಪೊಲಿಯೊ ನಿರ್ಮೂಲನೆಗಾಗಿ, 'ಜೀವನಕ್ಕಾಗಿ ಎರಡು ಹನಿ' ಎಂಬ, ಜನಾಂದೋಲನ ಆರಂಭಿಸಿತು. ಭಾರತ, ದಶಕಗಳ ಸತತ ಪ್ರಯತ್ನದ ಬಳಿಕ, ಪೊಲಿಯೊ ಮುಕ್ತ ದೇಶವಾಗಿ, ಹೊರಹೊಮ್ಮಿದೆ.

<><><>

ವಿಶ್ವ ಶಾಂತಿ ಕಾಪಾಡಲು ಹಾಗೂ ಭವಿಷ್ಯದ ಪೀಳಿಗೆಯನ್ನು ಯುದ್ಧದ ದುಷ್ಪರಿಣಾಮಗಳಿಂದ ರಕ್ಷಿಸಲು, 1945ರ ಅಕ್ಟೋಬರ್ 24 ರಂದು ಅಂತಾರಾಷ್ಟ್ರೀಯ ಸಂಘಟನೆ, ವಿಶ್ವಸಂಸ್ಥೆ ಸ್ಥಾಪನೆಗೊಂಡಿತು. ಆರೋಗ್ಯ, ಪರಿಸರ, ಮಹಿಳಾ ಸಬಲೀಕರಣದಂತಹ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು, ವಿಶ್ವಸಂಸ್ಥೆ ಕಾರ್ಯನಿರತವಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ಇತಿಹಾಸ ಪ್ರಾಧ್ಯಾಪಕ, ಡಾಕ್ಟರ್ ಬಸವರಾಜ ಅಕ್ಕಿ.

<><><>

ಡಾಕ್ಟರ್ ಬಸವರಾಜ ಅಕ್ಕಿ ಧ್ವನಿ 45 ಸೆಕೆಂದುಗಳು

<><><>

ಆಕಾಶವಾಣಿಯ ಬಹುಶ್ರುತ, 'ಮನ್ ಕಿ ಬಾತ್'ನ, 139ನೇ ಸಂಚಿಕೆ, ನಾಳೆ 25ನೇ ತಾರೀಖು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಮನದ ಮಾತು ಹಂಚಿಕೊಳ್ಳಲಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನ ಸೇರಿದಂತೆ, ನ್ಯೂಸ್ ಆನ್ ಏರ್ ಆಪ್‌ನಲ್ಲೂ, ಏಕಕಾಲಕ್ಕೆ ಪ್ರಸಾರವಾಗಲಿದೆ. ಬಳಿಕ, ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಗಳಲ್ಲಿ, ಮನದ ಮಾತು ಪ್ರಸಾರವಾಗಲಿದೆ.

<><><>

ಕೇಂದ್ರ ವಿಚಕ್ಷಣಾ ಆಯೋಗ, ನವೆಂಬರ್ 1ರ ವರೆಗೆ, 'ವಿಚಕ್ಷಣಾ ಅರಿವು ಸಪ್ತಾಹ 2026' ಆಯೋಜಿಸಿದೆ. "ಸತ್ಯನಿಷ್ಠೆಯಿಂದ ಸಮೃದ್ಧಿ" ಧ್ಯೇಯದೊಂದಿಗೆ, ಸರ್ದಾರ ವಲ್ಲಭಭಾಯಿ ಪಟೇಲ ಅವರ, ಜನ್ಮದಿನದ ಅಂಗವಾಗಿ, ಈ ಅಭಿಯಾನ ನಡೆಯಲಿದೆ. ನಾಗರಿಕರು, 'MyGov CVC Pledge' ಮೂಲಕ, ಆನ್‌ಲೈನ್‌ನಲ್ಲಿ ಪ್ರತಿಜ್ಞೆ ಸ್ವೀಕರಿಸಲು, ಕೋರಲಾಗಿದೆ.

<><><>

ಸಂಕ್ಷಿಪ್ತ ಸುದ್ದಿಗಳು:

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕಿನ, ವಿಶ್ವ ಪಾರಂಪರಿಕ ತಾಣ ಹಂಪಿ, ಹಾಗೂ ಆನೆಗುಂದಿ, ಅಂಜನಾದ್ರಿಯಲ್ಲಿ, ಯುನೆಸ್ಕೋ ಮಾನಿಟರಿಂಗ್ ತಂಡ, ಇಂದಿನಿಂದ 29ನೇ ತಾರೀಖಿನ ವರೆಗೆ, ಐತಿಹಾಸಿಕ ಸ್ಮಾರಕ, ಪಾರಂಪರಿಕ ತಾಣಗಳ ನಿರ್ವಹಣೆಯನ್ನು ಪರಿಶೀಲಿಸಲಿದೆ.

<><><>

ಇಂಡೋ–ಟಿಬೆಟಿಯನ್, ಬಾರ್ಡರ್ ಪೊಲೀಸ್ – ಐ.ಟಿ.ಬಿ.ಪಿ. ಸಂಸ್ಥಾಪನಾ ದಿನವಿಂದು. ಇದು, ಭಾರತದ, 'ಕೇಂದ್ರೀಯ, ಸಶಸ್ತ್ರ ಪೊಲೀಸ್ ಪಡೆ'ಗಳಲ್ಲಿ, ಒಂದಾಗಿದೆ.

<><><>

ಮಂಡ್ಯ ಜಿಲ್ಲಾ ಪಂಚಾಯಿತಿ, ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಪ್ರದರ್ಶಿಸಿದ ಸ್ತಬ್ಧಚಿತ್ರ, 'ಅಸ್ಮಿತೆ – ಸ್ತ್ರೀ ಶಕ್ತಿಯ ಅನಾವರಣ', ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ.

<><><>

ನೈಋತ್ಯ ರೇಲ್ವೆ, ತನ್ನ ಪಿಂಚಣಿದಾರರು, ಡಿಜಿಟಲ್ ಜೀವಿತ ಪ್ರಮಾಣಪತ್ರ ಸಲ್ಲಿಸುವ, 5ನೇ ಆವೃತ್ತಿಯ ಅಭಿಯಾನವನ್ನು, ನವೆಂಬರ್ 1 ರಿಂದ, 30ರ ವರೆಗೆ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ;** ರಾಜ್ಯ ಸರ್ಕಾರದ ಪಾಲಿನ, ಪ್ರೀಮಿಯಂ ಮೊತ್ತ ಪಾವತಿಸಲು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಒತ್ತಾಯ.

- **'ರಾಷ್ಟ್ರೀಯ ಶಿಕ್ಷಣ ನೀತಿ' ಮೂಲಕ,** 'ನವ ಭಾರತ'ದ ನಿರ್ಮಾಣ – ಪ್ರಧಾನಮಂತ್ರಿ ನರೇಂದ್ರ ಮೋದಿ.

- **ವಿಶ್ವ ಶಾಂತಿಗಾಗಿ ಸ್ಥಾಪನೆಗೊಂಡ,** ವಿಶ್ವಸಂಸ್ಥೆಯ, ಸಂಸ್ಥಾಪನಾ ದಿನವಿಂದು.
- **ಇಂದು, ವಿಶ್ವ ಪೊಲಿಯೊ** ಜನ ಜಾಗೃತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>